**ಸಿಸಿ ನಂಃ *54* /2025**

**ಪಿ .ಡಬ್ಲು-1**

ಸಾಕ್ಷಿಯನ್ನು ದಿನಾಂಕಃ 24.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಅರೋಪಿ ಪರ ಶ್ರೀ. ಹೆಚ್ ಎಸ್ ಎನ್ ವಕೀಲರಿಂದ**

ಸಾಕ್ಷಿಗೆ ಕನ್ನಡ ಬಾಷೆ ಬರದೇ ಇರುವುದರಿಂದ ಶ್ರೀ ಎಸ್ ಡಿ ಪಿ ವಕೀಲರನ್ನು ಬಾಷಾಂತರರನ್ನಾಗಿ ನೇಮಕ ಮಾಡಲಾಯಿತು.

ನಾನು ಕಡಲೇ ಕಾಯಿ ವ್ಯಾಪಾರವನ್ನು ಕಳೆದ 20 ವರುಷಗಳಿಂದ ಮಾಡಿರುತ್ತೇನೆ. ಲಕ್ಷ್ಮೀ ಶ್ರೀನಿವಾಸ ಡಿ ಕಾರ್ಡಿಕೇಟಿಂಗ್ ಮೀಲ್ ನ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಬಿಲ್ಲನ್ನು ಹಾಜರುಪಡಿಸಿರುತ್ತೇನೆ. ಅರೋಪಿಯು 4-5 ವರುಷಗಳಿಂದ ನನ್ನ ಬಳಿ ವ್ಯಾಪಾರ ಮಾಡುತ್ತಾರೆ. ನಿಮ್ಮ ಬಳಿ ಕಡಲೇ ಕಾಯಿ ವ್ಯಾಪಾರ ಮಾಡಿದರೆ ಬಿಲ್ಲು ನೀಡಿರುತ್ತೀರಿ ಎಂದರೆ ಇಲ್ಲ. ಕಡಲೇಕಾಯಿ ವ್ಯಾಪಾರ ಮಾಡಿದರೆ ಜಿ ಎಸ್ ಟಿ ಸೇರಿ ಬಿಲ್ ನೀಡಬೇಕು ಎಂದರೆ ಸರಿ ಮುಂದುವರೆದು ಅರೋಪಿಗೆ ಬಿಲ್ ನೀಡಿಲ್ಲ. ಅರೋಪಿಗೆ ಎಷ್ಟು ಸರಕನ್ನು ಮಾರಾಟ ಮಾಡಿರುತ್ತೇನೆಂದು ಪಿರ್ಯಾದಿಯಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ . 50 ಸಾವಿರಕ್ಕಿಂತ ಹೆಚ್ಚು ವ್ಯಾಪಾರ ಮಾಡಿದರೆ ಜಿ ಎಸ್ ಟಿ ಇ ವೇ ಬಿಲ್ ನ್ನು ಮಾಡಬೇಕು ಎಂದರೆ ಸರಿ . ಸದರಿ ಬಿಲ್ ನಲ್ಲಿ ಎಷ್ಟು ಸರಕನ್ನು ಮಾರಾಟ ಮಾಡಿರುವುದಾಗಿ ಹಾಗೂ ಯಾವ ವಾಹನದ ಎಂಬ ವಿವರಗಳು ನಮೂದಿಸಬೇಕು ಎಂದರೆ ಸರಿ , ಅರೋಪಿಗೆ ಪರವಾನಗಿ ಇಲ್ಲದ ಕಾರಣ ನೀಡಿಲ್ಲ ಎಂದು ನುಡಿಯುತ್ತಾರೆ. ಅರೋಪಿಗೆ ಕಡಲೇ ಬೀಜ ಮಾರಾಟ ಮಾಡಿರುವ ಬಗ್ಗೆ ನಿಮ್ಮ ಬಿಲ್ ಪುಸ್ತಕದಲ್ಲಿ ನಮೂದಿಸಿರುತ್ತೀರಾ ಎಂದರೆ ಇಲ್ಲ.

ಅರೋಪಿಗೆ ಬಿಟ್ಟು ಬೇರೆಯವರಿಗೆ ವ್ಯಾಪಾರದ ಮಾಡಿದಾಗ ಬಿಲ್ ಪುಸ್ತಕದಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಹೌದು. ಜಿ ಎಸ್ ಟಿ ಹಾಕುವ ಸಂಬಂದ ನಾನು ಪ್ರತ್ಯಕ ಬಿಲ್ ಪುಸ್ತಕವನ್ನು ಇಟ್ಟುಕೊಂಡಿಲ್ಲ. ಜಿ ಎಸ್ ಟಿ ಹಾಕದೇ ನಾನು ವ್ಯಾಪಾರ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಜಿ ಎಸ್ ಟಿ ಇಲ್ಲದೇ ವ್ಯಾಪಾರ ಮಾಡಿದರೆ ಅಕ್ರಮ ವ್ಯಾಪಾರವಾಗುತ್ತದೆ ಎಂದರೆ ಸರಿಯಲ್ಲ.

ಅರೋಪಿಯೊಂದಿಗೆ ವ್ಯಾಪಾರ ಮಾಡಿರುವ ಬಗ್ಗೆ ಯಾವುದಾದರೂ ಪುಸ್ತಕದಲ್ಲಿ ನಮೂದು ಮಾಡಿಕೊಂಡಿರುತ್ತೀರಾ ಎಂದರೆ ಇಲ್ಲ. ಅ ರೀತಿ ನಮೂದು ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ. ಅರೋಪಿಗೆ ಯಾವ ದಿನಾಂಕದಂದು ಕಡಲೇ ಬೀಜ ನೀಡಿರುತ್ತೀರಿ ಎಂದರೆ ಕಳೆದ ವರುಷ ಡಿಸೆಂಬರ್ ನಲ್ಲಿ ನೀಡಿರುತ್ತೇನೆ. ನಿಮ್ಮ ವ್ಯಾಪಾರದ ಬಗ್ಗೆ ಅದಾಯ ತೆರಿಗೆ ಪಾವತಿ ಮಾಡುತ್ತೀರಾ ಎಂದರೆ ಹೌದು, ನಿಮ್ಮ ಅದಾಯ ತೆರಿಗೆ 2024 ರೀಟರ್ನ್ಸ್ ನ್ನು ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ. ಹಾಜರುಪಡಿಸಲು ತೊಂದರೆ ಇದಯಾ ಎಂದರೆ ಅಡಿಟರ್ ನ್ನು ಕೇಳಬೇಕು ಎಂದು ನುಡಿಯುತ್ತಾರೆ. ಅಡಿಟರ್ ರವರು ನೀಡಬಹುದು ಎಂದರೆ ನೀಡುತ್ತೀರಾ ಎಂದರೆ ಹೌದು.

ಅರೋಪಿಗೆ ಯಾವುದೇ ಸರಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನೀಡಿದ್ದರೆ ಬಿಲ್ ಇರುತ್ತಿತ್ತು ಎಂದರೆ ಬಿಲ್ ಹಾಕಿರುವುದಿಲ್ಲ. ನಿಮಗೆ ವರುಷಕ್ಕೆ ಎಷ್ಟು ಅದಾಯ ಇರುತ್ತದೆ ಎಂದರೆ ಅ ಬಗ್ಗೆ ನನಗೆ idea ಇರುವುದಿಲ್ಲ. ನಾನು ಯಾವುದೇ ಕಡಲೇ ಕಾಯಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಜಿ ಎಸ್ ಟಿ ನಂಬರ್ ಹೇಳುವಿರಾ ಎಂದರೆ ಹೇಳಲಾಗುವುದಿಲ್ಲ. ನಿಪಿ 1 ರ ದಿನಾಂಕ ಗೊತ್ತಿದೆಯಾ ಎಂದರೆ ಇಲ್ಲ. ಅರೋಪಿಯು ನಿಮ್ಮ ಬಳಿ ಯಾವುದೇ ವ್ಯಾಪಾರ ಮಾಡಿಲ್ಲ ಹಾಗೂ ನಿಪಿ 1 ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**